# ವರ್ತಮಾನದ ಕನ್ನಡಿಯಲ್ಲಿ ಕನಕ ದರ್ಶನ

**ಚಿಕ್ಕಮಗಳೂರು ಗಣೇಶ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಗೃಹವಿಜ್ಞಾನ ಕಾಲೇಜು, ಹೊಳೆನರಸೀಪುರ, ಹಾಸನ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294272**

**ABSTRACT:**

ಭಕ್ತಿಯ ಖಾಸಗಿ ವಿಚಾರಗಳನ್ನು ಸಮಾಜ ಸುಧಾರಣೆಗೆ ಮಾಧ್ಯಮವಾಗಿ ಬಳಸಿಕೊಂಡ ಕನಕದಾಸರು ಕನ್ನಡ ನಾಡಿನ ಅನನ್ಯ ಭಕ್ತಿ ಕವಿ. ಅವರು ವಾಸಿಸುತ್ತಿದ್ದ ಮಧ್ಯಕಾಲೀನ ಅವಧಿಯು ಸಂಕೀರ್ಣವಾಗಿತ್ತು. ಇದು ಧರ್ಮ ಮತ್ತು ಆಡಳಿತದ ನಡುವಿನ ತೀವ್ರ ಸಂಘರ್ಷದ ಅವಧಿ. ಅಲ್ಲಿ ಅವರು ಹರಿದಾಸ ಚಳವಳಿಯ ಮುಖವಾಣಿಯಾಗಿ ನಮ್ಮನ್ನು ಭೇಟಿಯಾಗುತ್ತಾರೆ. ಆ ಚಳವಳಿಯ ತತ್ತ್ವಶಾಸ್ತ್ರವು ಮೇಲ್ನೋಟಕ್ಕೆ ಉದಾರವಾದದ್ದಾಗಿತ್ತು. ಆಂತರಿಕವಾಗಿ ದೋಷಯುಕ್ತ, ತಾರತಮ್ಯ ಮತ್ತು ಅಸಮ ನೆಲ. ಕನಕನೂ ತನ್ನ ಹಿನ್ನಲೆಯಲ್ಲಿ ಇಟ್ಟುಕೊಂಡಿರುವ ಎಲ್ಲ ಸೈದ್ಧಾಂತಿಕ ಗೊಂದಲಗಳಲ್ಲಿ ಸಿಲುಕಿಕೊಳ್ಳುತ್ತಾನೆ. ವ್ಯಾಸಕೂಟ ಮತ್ತು ದಾಸಕೂಟಗಳು ತಾತ್ವಿಕ ಸಂಘರ್ಷದ ನಡುವೆ ತಮ್ಮನ್ನು ತಾವು ಪ್ರತಿಪಾದಿಸಲು ಹೆಣಗಾಡುತ್ತವೆ.

ಚಳವಳಿಯ ಪರಿಸರದಲ್ಲೂ ಅಪಾರ ಒಂಟಿತನ ಅನುಭವಿಸಿದ ಕವಿ. ಇದಕ್ಕೆ ಕಾರಣವೆಂದರೆ ಅವರು ಹುಟ್ಟಿರುವ ಜಾತಿಯ ಹಿನ್ನೆಲೆ, ಶೂದ್ರ (IV ನೇ ವರ್ಣ) ಜಾತಿಯಿಂದ ಬಂದು ಭಕ್ತಿ ಚಳುವಳಿಯ ಮೂಲಕ ಅವರು ತಮ್ಮ ಜೀವನದುದ್ದಕ್ಕೂ ಲೆಕ್ಕವಿಲ್ಲದಷ್ಟು ಅವಮಾನಗಳನ್ನು ಅನುಭವಿಸುತ್ತಾರೆ. ಅವರು ಅನೇಕ ಅಗ್ನಿಪರೀಕ್ಷೆಗಳನ್ನು ಸಹ ಎದುರಿಸುತ್ತಾರೆ. ಆದರೆ ಅದರ ನಡುವೆಯೂ ಅವರು ವ್ಯವಸ್ಥೆಗೆ ವಿರುದ್ಧವಾದ ಮಾತುಗಳನ್ನು ದಾಖಲಿಸದೆ ಬಿಡುವುದಿಲ್ಲ. ಅದಕ್ಕಾಗಿ ಕನ್ನಡ ಕಾವ್ಯಾಭಿವ್ಯಕ್ತಿಯ ವಿವಿಧ ರೂಪಗಳಲ್ಲಿ ತಮ್ಮನ್ನು ತಾವು ತೆರೆದುಕೊಳ್ಳುತ್ತಲೇ ಇರುತ್ತಾರೆ. ಈ ಅರ್ಥದಲ್ಲಿ ಕನಕದಾಸರು ಆ ಕಾಲದ ಏಕಾಂಗಿ ಧ್ವನಿಯಾಗಿದ್ದರು. ವಿಭಜಕ ಧ್ವನಿ ಕೂಡ.

**KEYWORDS:**

ಸಂಸ್ಕೃತೀಕರಣ, ಬೆವರಿನ ಸಂಸ್ಕೃತಿ, ದಲಿತ-ಬಂಡಾಯ ಯುಗ, ಸಮನ್ವಯ, ಜೀವನ ಮೀಮಾಂಸೆ, ರಾಯಭಾರಿ.

**ಪೀಠಿಕೆ:**

ಕನ್ನಡದ ಮಹತ್ವದ ಕವಿ ಕನಕದಾಸ ದೂರದೂರದ ವಿವಿಧ ಕ್ಷೇತ್ರಗಳನ್ನು ಸಂದರ್ಶಿಸಿ ತತ್ವಪ್ರಚಾರ ಮಾಡಿದ ಬರಿಗಾಲ ಸಂತ. ಈ ಹೊತ್ತಿಗೂ ಅದಕ್ಕೆ ಸಾಕ್ಷಿಯಾಗಿ ತಮಿಳುನಾಡಿನ ತಂಜಾವೂರಿನಲ್ಲಿ 'ಕನಕನ ಕೊಳ'ವನ್ನು ನಾವು ಕಾಣಬಹುದು. ರಾಜಸ್ತಾನದಲ್ಲಿ ಸ್ವತಃ ರಾಣಾಪ್ರತಾಪನೇ ಕಟ್ಟಿಸಿದ 'ಕನಕ ಬೃಂದಾವನ'ವಿದೆಯಂತೆ! ಆಂಧ್ರದ ಕವಿಯೊಬ್ಬ ಅವರನ್ನು ಕುರಿತು ಹೇಳಿರುವ, 'ಕನಕ ಮೀರು ಬಂಗಾರ ತುನಕ; ಕನ್ನಡ ಕವುಲೆಲ್ಲ ನೂವೆನಕ' ಎಂಬ ಪ್ರಶಂಸೆಯ ಮಾತುಗಳು ಜನಪ್ರಿಯವಾಗಿವೆ. ತಿರುಪತಿಯಲ್ಲಿ ಕನಕದಾಸನನ್ನು ನೆನಪಿಸುವ ಹಲವು ಪವಾಡ ಕತೆಗಳು ಈಗಲೂ ಬೆಳೆಯುತ್ತಿವೆ. ಉಡುಪಿಯ 'ಕನಕನ ಕಿಂಡಿ'ಯಂತೂ ವಿಶ್ವಪ್ರಸಿದ್ಧ ಸಂಗತಿಯೆನಿಸಿದೆ. ಇವೆಲ್ಲವುಗಳನ್ನು ನೋಡಿದರೆ ಕನಕದಾಸ ನಮ್ಮ ಅಲ್ಲಮನಂತೆ, ಕನ್ನಡದ ಭಕ್ತಿಚಳವಳಿಯು ಕಟ್ಟಿಕೊಟ್ಟ ವಿವೇಕವನ್ನು ದೇಶದುದ್ದಕ್ಕೂ ಪಸರಿಸಿದ ಸಂತಶ್ರೇಷ್ಠ ಎಂಬುದು ಅರಿವಾಗುತ್ತದೆ. ಈ ನೆಲೆಯಲ್ಲಿ ಕೂಡ ಅವರು ಉಳಿದ ಹರಿದಾಸರಿಗಿಂತ ಅತ್ಯಂತ ಎತ್ತರದ ಸ್ಥಾನದಲ್ಲಿದ್ದಾರೆ.

**ಅಧ್ಯಯನದ ವ್ಯಾಪ್ತಿ:**

ಕನಕದಾಸನನ್ನು ಇದುವರೆಗೂ ಗಂಭೀರ ವಿಶ್ಲೇಷಣೆಯಿಂದ ನಮ್ಮ ಚಿಂತಕ ಸಮೂಹ ಮುಟ್ಟದೆ ಹೊರಗಿಟ್ಟಿರುವುದಕ್ಕೆ ಕಾರಣಗಳನ್ನು ಹುಡುಕಿದರೆ ಅಚ್ಚರಿ ಹುಟ್ಟಿಸುತ್ತದೆ.

1. **ಸಂಪ್ರದಾಯನಿಷ್ಠ ವಿದ್ವಜ್ಜನ ಸಮೂಹ ನಿರೂಪಣೆ:** ಇವರ ಪ್ರಕಾರ, ಕುಲದ ಹಿನ್ನೆಲೆಯಿಂದ 'ಕವಿ'ಯಾಗಲು ಸಾಧ್ಯವಿಲ್ಲದ ಹಿನ್ನೆಲೆಯವನು. ಹಾಗಾಗಿ ಅವನ ಸಾಹಿತ್ಯವನ್ನು ವಸ್ತುನಿಷ್ಠವಾಗಿ ವಿಮರ್ಶಿಸದೆ 'ಭಕ್ತ', 'ದಾಸ' ಎಂಬಂತೆ ತೇಲಿಸಲಾಗಿದೆ. ಆರಂಭದ ನಮ್ಮ ಸಾಹಿತ್ಯ ಚರಿತ್ರೆಗಳಲ್ಲಿ ಒಂದೊಂದು ಜಡ ಧಾರ್ಮಿಕ ಕೃತಿ ರಚಿಸಿದವರ ಬಗ್ಗೆ ಹೇಳುವಷ್ಟು ಉದಾರತೆಯೂ ಕವಿಯಾಗಿ ಇವನ ಕೃತಿಗಳಿಗೆ ಸಿಕ್ಕಿಲ್ಲ.

2. **ಆಧುನಿಕ ಪ್ರಗತಿಪರ ವಿದ್ವಜ್ಜನ ಸಮೂಹ ನಿರೂಪಣೆ:** ತನ್ನ ಹುಟ್ಟು ಜಾತಿಯ ಪೊರೆ ಕಳಚಿಕೊಂಡವನು ಅಥವಾ ಜಾತಿ ಬಿಟ್ಟವನು. ಅಂದರೆ, ಶೂದ್ರತನ ತೊರೆದು ಸಂಸ್ಕೃತೀಕರಣಕ್ಕೆ ಒಳಗಾದವನು. ಯಾವ ನೆಲೆಯನ್ನು ವಿರೋಧಿಸಬೇಕಾಗಿತ್ತೋ ಅದೇ ನೆಲೆಗೆ ಬಂದು ನಿಂತುಕೊಂಡವನು ಎಂಬ ಆರೋಪ. ಆದ ಕಾರಣ ಕನಕನನ್ನು ಮುಟ್ಟಲು ಮುಜುಗರ, ಮಡಿವಂತಿಕೆ. ಆತನ ಕೃತಿಗಳನ್ನು ವಿಶ್ಲೇಷಿಸಲು ಹಿಂಜರಿಕೆ ತೋರುತ್ತಾರೆ.

**ಈ ಬಿಂದುವಿನಿಂದಲೇ ನಾವು ಚರ್ಚೆ ಪ್ರಾರಂಭಿಸಬಹುದು:**

"ಕುರುಬತನ ತೊರೆದು ಸಂಸ್ಕೃತೀಕರಣಗೊಂಡವನೆ ಕನಕ?" ಅಥವಾ ಹಾಗೇ ಆಗಿದ್ದರೆ ಕಾರಣಗಳೇನು? ಒದಗಿಬಂದ ಒತ್ತಡಗಳೇನು? ಹಾಗಾಗದಿದ್ದರೆ ಅವನ ನಡೆಯನ್ನು ಹೇಗೆ ಅರ್ಥೈಸಬೇಕು? ಎಂಬ ಹಲವು ಪ್ರಶ್ನೆಗಳು ಎದುರಾಗುತ್ತವೆ. ಬಸವಣ್ಣ ತನ್ನ ಕಾಲದಲ್ಲಿ ತಾನು `ಹಾರುವ'ನಲ್ಲ ಎಂದು ಸಾಧಿಸಲು ಪ್ರತಿಕ್ಷಣ ಹೆಣಗಾಡಿದಂತೆ, ಕನಕ

ತಾನು 'ಕುರುಬ'ನಲ್ಲ ಎಂದು ನಿರೂಪಿಸಲು ಹೆಣಗಾಡಿದ್ದಾನೆ. ಅವನು ಪ್ರಜ್ಞಾಪೂರ್ವಕವಾಗಿ ಹಾಗೆ ಮಾಡಿದರೆ ಕನಕ ಒತ್ತಡಪೂರ್ವಕವಾಗಿ, ಆತ ಸಾಮಾಜಿಕ ಕಾಳಜಿ ಮತ್ತು ನಿರ್ಜಾತೀಕರಣದ ತಂತ್ರದ ಕಾರಣದಿಂದ. ಈತ ಅದೇ ಕಾಳಜಿ ಮತ್ತು ಅವಮಾನಗಳ ಅನಿವಾರ್ಯ ಒತ್ತಡದಿಂದ ಮಾಡುತ್ತಿದ್ದಾನೆ. ಅಷ್ಟೊಂದು ಬಗೆಯಲ್ಲಿ ಅವನಿಗೆ ಉದ್ದಕ್ಕೂ ಸವಾಲುಗಳು ಅಗ್ನಿಪರೀಕ್ಷೆಗಳು ಎದುರಾಗಿವೆ ಎನ್ನಬಹುದು

ಹಾಗೆಂದು ಆತನನ್ನು ಸಂಪೂರ್ಣವಾಗಿ ಕುರುಬತನ ಮೀರಿದ ಭಾಗವತ ದಾಸ ಪಂಥದ ಅಚ್ಚಿಗೆ ಒಗ್ಗಿಸಲು ಸಾಧ್ಯವಾಗದು. ಕಾರಣ ಆತ ಸ್ಥಳೀಯ ಚಹರೆಗಳಿಂದ ಮುಕ್ತನಾದವನೇನಲ್ಲ. ರೂಪಕದಲ್ಲಿ ಹೇಳುವುದಾದರೆ: ಆತ ನೆಲದ ಬೇರಿನಿಂದ ಅರಳಿದ, ಆದರೆ ಎಂದೂ ಬಾಡದ ಹೂವು. ಕನಕನ ಬಾಹ್ಯವೇಷ ಹಾಗೂ ಆತ ತನ್ನ ಆಲೋಚನೆಯ ಅಭಿವ್ಯಕ್ತಿಗಾಗಿ ಬಳಸುವ ಭಾಷೆ-ಇವೆರಡೂ ಈ ನೆಲದ ಬೆವರಿನ ಸಂಸ್ಕೃತಿಯನ್ನೇ ಪ್ರತಿಬಿಂಬಿಸುತ್ತಿದೆ. ಮೇಲ್ನೋಟಕ್ಕೆ ಅವನು ಒಬ್ಬ ಹರಿದಾಸ. ಸರಿಯಾಗಿ ನೋಡಿದರೆ ಕಂಬಳಿದಾಸ, ಆ ದಾಸವೇಷದ ಒಳಗೊಬ್ಬ ಕುರಿಯಯ್ಯ ಅಡಗಿದ್ದಾನೆ ಎನ್ನಬಹುದು. ಉಳಿದ ದಾಸರಿಗಿಂತ ಚಿಂತನೆಯೂ ಭಿನ್ನ ವಿಶೇಷ. ನಾವು ಈಗ, ಆತ ಹುಟ್ಟಿದ ಕುರುಬ ಕುಲ ಹಾಗೂ ಮುಟ್ಟಿದ ಭಾಗವತ ನೆಲೆಯ ನಡುವೆ ಅಡಗಿಸಿಟ್ಟು ತೋರುತ್ತಿರುವ ಸತ್ಯದ ದಾರಿಯನ್ನು ಅರಿತು ಸಾಗಬೇಕು.

**ಅಧ್ಯಯನದ ವಸ್ತು-ವಿಷಯ:**

**ಕನಕ ಕುಲ ವಿಚಾರ:**

ನಮ್ಮ ದೇಶದಲ್ಲಿ ಜಾತಿಕುಲವಿಚಾರ ಎಂಬುದು “ಬಿಟ್ಟೆನೆಂದರೂ ಬಿಡದ ಮಾಯೆ”. ಇಲ್ಲಿ ಕವಿಯಾದವನು ಬಯಸಲಿ-ಬಿಡಲಿ, ಸಮಾಜ ಮತ್ತು ಅಲ್ಲಿನ ಸಮುದಾಯ ಕೆದಕುವುದು ಸಹಜ ಸಂಗತಿ. ಕನಕ ಏನನ್ನು ಹೇಳಿದ ಅನ್ನುವಷ್ಟೇ ಆತನ ಅಸ್ತಿತ್ವದ ಬಗ್ಗೆ ಯಾವ ಬಗೆಯ ನಿರೂಪಣೆಗಳನ್ನು ಐತಿಹ್ಯ-ಪವಾಡಗಳ ರೂಪದಲ್ಲಿ ಸಷ್ಟಿಸಿದೆ ಎಂಬುದು ಮುಖ್ಯ.

ಈ ಹಿನ್ನೆಲೆಯಲ್ಲಿ ಕನಕನನ್ನು ನಿರೂಪಿಸಿ ಕೊಟ್ಟಿರುವ ಕ್ರಮವನ್ನು ಪರಿಶೀಲಿಸಬಹುದಾದರೆ, ಐತಿಹ್ಯಗಳು ದೊರಕಿದ ಲೆಕ್ಕಾಚಾರದಲ್ಲಿ ಅವನೊಬ್ಬ Richest Mythological figure. ಐತಿಹ್ಯಗಳೆಂಬುದು ವಾಸ್ತವ ಚರಿತ್ರೆಗೆ ಹೊದಿಸಿರುವ ಹೊದಿಕೆಗಳು. ಇದರಲ್ಲಿ ಬಹುಪಾಲು ಐತಿಹ್ಯಗಳು ಅವನ ಕುಲಕ್ಕೆ ಸಂಬಂಧಿಸಿದಂತೆ ನಿರೂಪಣೆ ಮಾಡುವಂಥವು. ವಾಸ್ತವ ಬದುಕಿನಲ್ಲಿ ಕುಲವು ಕಾರಣವಾಗಿ ಒದ್ದಾಡಿದ ಕನಕನನ್ನು ಈ ಪುರೋಹಿತಶಾಹಿ ನಿರೂಪಣೆಗಳು ಅನ್ಯಮೂಲಕ್ಕೆ ಕೊಂಡೊಯ್ಯುತ್ತದೆ ಎಂಬುದು ಅಚ್ಚರಿ ಮತ್ತು ವಿಷಾದದ ವಿಚಾರ.

ಅದರ ಪ್ರಕಾರ, ಕನಕ ಯಮನ ಅಂಶ ಅಥವಾ ಅವತಾರ. ಅನಂತರ ಆತ ವಿದುರನಾಗಿ, ಶೂದ್ರ ಕನಕನಾಗಿ, ಅಂತ್ಯಜ ಕನಕನಾಗಿ ಪುನರ್ಭವ ಪಡೆಯುತ್ತಾನೆ. ಅದನ್ನು ಒಂದು ಉಗಾಭೋಗದ ಮೂಲಕ ಅರುಹುತ್ತಾನೆ ಕನಕ. ಅದು ಇಂತಿದೆ:

**ನಾರದರ ಅಂಶವೇ ಪುರಂದರದಾಸರು, ನಾ ಯಮನು ಮುಂದೆ**
**ಮಾಂಡವ್ಯ ಶಾಪದಿಂದ ಎರಡು ಜನ್ಮ ಶೂದ್ರಯೋನಿಯಲ್ಲಿ ಪೊಕ್ಕೆನು**
**ಒಂದು ಜನುಮ ವಿದುರನಾಗಿ, ಕುರುಬರ ಕುಲದಲ್ಲೀಗ ಪುಟ್ಟಿದೆ**
**ಎನಗೆ ಈ ಜನ್ಮದಲ್ಲಿ ಮುಕುತಿ ಎಂತೆಂಬೆ[1]**

ಇದರ ಪ್ರಕಾರ, ಪಾಪದ ಕಾರಣಕ್ಕಾಗಿ ಕನಕನಿಗೆ ಈ ಅವತಾರಗಳು ಪ್ರಾಪ್ತಿಯಾಗಿವೆ. ವರ್ತಮಾನದ ಆತನ ಕುಲ ಕೂಡ ಅದು ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಧರಿಸಿಕೊಂಡು ಬಂದಿರುವಂಥದ್ದು. 'ಕುರುಬ ಕುಲ'ವೆಂಬುದು ನೆಪಮಾತ್ರವಾಗಿ ಮುತ್ತಿಕೊಂಡಿರುವ ಮಾಯೆ. ಈ ಮಾಯೆಯ ನೆರಳಿನಂತೆ ಹಿಂಬಾಲಿಸುತ್ತಿರುವ 'ಕುರುಬತನ'ವನ್ನು ಮೀರುವುದೇ ನಿಜವಾದ ಮುಕ್ತಿ ಮಾರ್ಗ.

ಒಂದು ಅಪರೂಪದ ಶೂದ್ರ ಪ್ರತಿಭೆಯನ್ನು ಆ ಕುಲವರ್ಗದ ಮೂಲಕವೇ ಗೌರವಿಸಿ, ಗುರುತಿಸದೆ ನಿರಾಕರಿಸುವ ಪುರೋಹಿತಶಾಹಿ ಯಥಾಸ್ಥಿತಿವಾದಕ್ಕೆ ಇದು ನಿದರ್ಶನ. ಹೊಸಕಾಲದ ಆರಂಭದಲ್ಲಿ ಕವಿಚರಿತೆಕಾರರು, ವಿದ್ವಾಂಸರು ಇದೇ ಬಗೆಯ ಕಸರತ್ತನ್ನು ಕವಿಯ ಕುಲಮೂಲ ಹುಡುಕುವ ನಿಟ್ಟಿನಲ್ಲಿ ಮಾಡುತ್ತಾರೆ ಅನ್ನುವುದು ಕುತೂಹಲದ ಸಂಗತಿ.

ಅಷ್ಟೊಂದು ಸರಳವಾಗಿ, ಪಾರದರ್ಶಕವಾಗಿ ಆತ ತನ್ನ ಕುರುಬಕುಲವನ್ನು ಹೇಳಿದ್ದರೂ ವಿದ್ವಾಂಸರು ಇದಕ್ಕಾಗಿ ತಮ್ಮ ಬುದ್ಧಿಶಕ್ತಿಯನ್ನೆಲ್ಲ ಖರ್ಚುಮಾಡಿ ವಾದಿಸುವುದು ಯಾತಕ್ಕಾಗಿ. ನನ್ನ ಪ್ರಕಾರ, ಕವಿ ಎಂದರೆ ಕೇವಲ ಕವಿಯಲ್ಲ. ಒಂದು ಸಮೃದ್ಧ ಜನಸಂಸ್ಕೃತಿಯ ಕೆನೆಪದರ. ಅಂತಹ ಕೆನೆಪದರವನ್ನು ನಿರಾಯಾಸವಾಗಿ ಶೂದ್ರ ಸಮುದಾಯದ ಪಾಲಿಗೆ ಕೊಡುವ ಬಗ್ಗೆ ಇಲ್ಲಿ ಹೇವರಿಕೆಯಿದೆ. ಕನಕನ ಇತಿವೃತ್ತ ವಿಚಾರ, ಇದೊಂಥರ ಶೂದ್ರಪಾಲು ನಿರಾಕರಿಸುವ ವಿದ್ವಾಂಸರ ವೈದಿಕ ಶೋಧಯಜ್ಞ.

ಆದರೆ ಜನಪದ ಸಮುದಾಯ ಅಷ್ಟೇ ತೀವ್ರತರವಾಗಿ ಪ್ರತಿ ಐತಿಹ್ಯಗಳನ್ನು ಸೃಷ್ಟಿಸಿ ಸಮರ್ಥಿಸಿಕೊಂಡಿರುವುದನ್ನು ಇಲ್ಲೇ ಹೇಳಬೇಕು. ಕುರುಬನಿಗೆ ಕೋಣನ ಮಂತ್ರ, ಉಡುಪಿ ಪ್ರಸಂಗ, ಅಂಬಿಗರ ದೇಗುಲ, ಮೀನಿನ ಪ್ರಸಂಗ ಮುಂತಾದುವನ್ನು ಹೆಸರಿಸಬಹುದು. ಹೀಗೆ ಐತಿಹ್ಯಗಳು ಸೃಷ್ಟಿಯಾದ ಹಿನ್ನೆಲೆಯಲ್ಲಿ ಕನಕನನ್ನು ನಾವು ಸಾಂಸ್ಕೃತಿಕ ನಾಯಕ ಎಂದು ಕರೆಯಬಹುದು.

**ಕನಕ ಒಡನಾಡಿದ ಕುಲಸ್ವರೂಪ:**

ಹರಿದಾಸರುಗಳಲ್ಲಿ 'ಕುಲ'ವನ್ನು ಕುರಿತಂತೆ ಹೆಚ್ಚು ಮಾತಾಡಿದವನು ಕನಕ; ಬಿಚ್ಚು ಮಾತಾಡಿದವನು ಕೂಡ. ನಮ್ಮ ದೇಶದಲ್ಲಿ, ಜಾತಿಕುಲವೆಂಬುದು ಬಹುಸಂಖ್ಯಾತ ಜನಸ್ತೋಮವನ್ನು ಹುಟ್ಟಿದ ಮೂಲದಿಂದ ವರ್ಗೀಕರಿಸಿ ಅವಮಾನಿಸಿದ ದುಷ್ಟವ್ಯವಸ್ಥೆ ಎಂಬುದು ಅವನಿಗೆ ತಿಳಿದಿತ್ತು. ಯಾಕೆಂದರೆ ಆತನೂ ಅಂತಹ ಅರಿವುಗೇಡಿ ವ್ಯವಸ್ಥೆಯ ಬಲಿಪಶುವಾಗಿದ್ದವನು. ತಾನು ಹುಟ್ಟಿದ ಕುಲವು ಕಾರಣವಾಗಿ ಪ್ರತ್ಯೇಕತೆಯನ್ನೂ, ಕೀಳರಿಮೆ-ಅವಮಾನವನ್ನೂ ಅನುಭವಿಸಿದವನು.[2]

ಅಲ್ಲದೆ, ಕನ್ನಡ ಹರಿದಾಸರುಗಳಲ್ಲಿ ಅವೈದಿಕ ಕುಲದಿಂದ ಬಂದು ವೈದಿಕವನ್ನು ಮುಖಾಮುಖಿಯಾದ ನಡೆಕಾರರಲ್ಲಿ ಮುಖ್ಯನಾದವನು ಇವನೊಬ್ಬನೇ. ಆ ಮುಖಾಮುಖಿಯ ಪ್ರತಿಫಲನವನ್ನು ವ್ಯಕ್ತಿನಿಷ್ಠ ಅಭಿವ್ಯಕ್ತಿಯಾದ ಕೀರ್ತನೆಗಳಲ್ಲೂ ವಸ್ತುನಿಷ್ಠ ಅಭಿವ್ಯಕ್ತಿಯಾದ ಕಾವ್ಯಗಳಲ್ಲೂ ಕಾಣಬಹುದು. ಎರಡೂ ಬೇರೆಯದೇ ಮಾಧ್ಯಮಗಳಂತೆ ಕಂಡರೂ, ಅವೆರಡೂ ಬೆಸೆದುಕೊಂಡಿರುವ ಏಕಸೂತ್ರ ತಂತುವೆಂದರೆ ಅದು ಸಮಾಜ ನಿಷ್ಠತೆ ಎನ್ನಬಹುದು.

ಕುಲದ ಮೂಲಕ ಮನುಷ್ಯನನ್ನು ಕೀಳು-ಮೇಲಾಗಿಸುವ ಜನರು ಯಾರೇ ಆಗಿರಲಿ, ಎಲ್ಲೇ ಇರಲಿ ಅವರಿಗೆಲ್ಲ ಕನಕ ಕೇಳುವ ಮಾರ್ಮಿಕ ಪ್ರಶ್ನೆ 'ನಿಮ್ಮ ಕುಲದ ನೆಲೆಯನ್ನು ಏನಾದರೂ ಬಲ್ಲಿರಾ?' ಎಂದು. ಬಲ್ಲವರಲ್ಲವೆಂದ ಮೇಲೆ "ಕುಲ ಕುಲ ಕುಲವೆಂದು ಹೊಡೆದಾಡುವುದಾದರೂ ಏಕೆ?" ಆತ ಕೇಳುವ ಮತ್ತೊಂದು ಮುಖ್ಯ ಪ್ರಶ್ನೆ-ಉತ್ತರವೂ ಅದರಲ್ಲೇ ಅಡಗಿದೆ. "ಸತ್ಯ ಸುಖವುಳ್ಳ ಜನರಿಗೆ ಕುಲ ಯಾವುದು?" ಎಂದು. ಕುಲದ ಕನವರಿಕೆ ಇರುವುದು ಸತ್ಯದಲ್ಲಿ ಸುಖವು ಕಾಣದ ವಂಚಕ ಮನುಷ್ಯರಿಗೆ ಮಾತ್ರ. ಅದೊಂದು ಹಿತಾಸಕ್ತ ಕೂಟದ ವಂಚನೆಯ ಮಾಧ್ಯಮ ಎಂಬುದು ಇದರ ಸೂಚ್ಯಾರ್ಥ.

ಮೊದಲೇ ಹೇಳಿದಂತೆ, ಕುಲನಿರಾಕರಣೆಯ ದರ್ದು ಕನಕನಲ್ಲೇ ಇದೆ. ಅದು ಆತನ ಕಾಲಕ್ಕೆ ಅನಿವಾರ್ಯತೆಯೂ ಆಗಿರಬಹುದು. ಅದೇ ಕೀರ್ತನೆಯನ್ನು ಮುಂದುವರೆಸುವುದಾದರೆ: ಸತ್ಯ ಸುಖವುಳ್ಳವರು 'ಕುಲನೆಲೆ'ಯನ್ನು ಮೀರಿದ ಪರಮ ಭಾಗವತರು. ಕುಲದ ಸ್ಮೃತಿಗಳನ್ನು ದಾಟುವುದೇ 'ಭಾಗವತ'ನಾಗಲು ಇರುವ ಏಕೈಕ ದಾರಿ. ಮುಕ್ತಿಯೆಂದರೆ 'ತನ್ನ ಹುಟ್ಟಿನ ಮೂಲವನ್ನು ಹರಿದುಕೊಳ್ಳುವುದು; ಉಪಾಧಿ ಮುಕ್ತರಾಗುವುದು'. ಆದ್ದರಿಂದಲೇ ಕುಲವಿಚಾರಕ್ಕೆ ಸಂಬಂಧಿಸಿದಂತೆ, ಆತನಲ್ಲಿ ಅಲ್ಲಲ್ಲಿ ನಯವಾದ ಪ್ರತಿರೋಧ ಕಿವಿಮಾತು ತಿಳಿಹೇಳಿಕೆಗಳನ್ನು ಕಾಣಬಹುದು. ಆದರೆ ಅದು, ವ್ಯಕ್ತಿಗತ ಪ್ರಶ್ನೆಯ ಮಟ್ಟದಲ್ಲೇ ನಿಲ್ಲುತ್ತದೆ. ಅದನ್ನು ಮೀರಿ ಪ್ರತಿಪಕ್ಷದೊಂದಿಗೆ ಸಂಘರ್ಷಕ್ಕಿಳಿಯುವುದಿಲ್ಲ. ಅದನ್ನು ತಾನು ಪ್ರತಿಪಾದಿಸುತ್ತಿರುವ ತತ್ತ್ವಚಿಂತನೆಯ ಮೂಲಭಿತ್ತಿಯನ್ನಾಗಿ ಅರಳಿಸುವುದಿಲ್ಲ. ತಾನು ತನ್ನ ಸಾಧಕ ಬದುಕಿನುದ್ದಕ್ಕೂ ಎದುರಿಸಿದ ಅವಮಾನ, ಕೀಳರಿಮೆ, ಪ್ರತ್ಯೇಕತಾಭಾವವನ್ನು ಘನೀಕರಿಸಿ 'ಅನುಭವ'ವಾಗಿ ಮೈತಳೆಯುವುದಿಲ್ಲ - ಎಂಬುದು ನೋವಿನ ಸಂಗತಿ.

ಕನಕನು ಮಂಡಿಸುವ ಕುಲನಿರ್ವಚನೆಯ ಸ್ವರೂಪ ವಿವರಿಸುವ ಸಂದರ್ಭದಲ್ಲಿ ಅಗತ್ಯವಾಗಿ ಅವನು ಒಡನಾಡಿದ ಕುಲಗಳ ನೆಲೆಯನ್ನು ವಿಶ್ಲೇಷಿಸಬೇಕು. ಅವನೊಬ್ಬ ಕಾಲುದಾರಿ ಸಂತ, ಮಹಾನ್ ತಿರುಗಾಟಕಾರ. ಆತ ತನ್ನ ಸಾಧಕ ಬದುಕಿನ ಆನುಭಾವಿಕ ಅಲೆದಾಟದಲ್ಲಿ ಹಲವು ಕುಲಗಳ ಜೊತೆ ಒಡನಾಟ-ಸಂವಾದ ಮಾಡುತ್ತಾನೆ. ಅದರಲ್ಲೂ ಮುಖ್ಯವಾಗಿ ಅಂಬಿಗ, ಗೊಲ್ಲ, ಕೊರಮ, ಆಚಾರಿ, ವೀರಶೈವ, ಕುಂಬಾರ, ಬೇಡ ಮೊದಲಾದ ಕಾಯಕ ಕುಲಗಳನ್ನು ಗೌರವದಿಂದ ಸ್ವೀಕರಿಸಿ ತನ್ನ ರಚನೆಗಳಲ್ಲಿ ಪ್ರತಿನಿಧಿಸುತ್ತಾನೆ. ಅದನ್ನು ವಿಭಾಗಿಸಿ ಪಟ್ಟಿ ಮಾಡುವುದಾದರೆ:

1. ಕಾವ್ಯದ ಕಥಾಭಿತ್ತಿಗೆ ಪೂರಕವಾಗಿ ಕುಲವಿಚಾರ ಮಂಡನೆ

2. ತಳನೆಲೆಗಳ ಬದುಕಿನ ಜ್ಞಾನ ಮಾದರಿಗಳ ಮಂಡನೆ

3. ಬೆವರಿನ ಬಳಗದ ಬದುಕಿನ ತಾಳಮಟ್ಟುಗಳನ್ನು

4. ಕಾವ್ಯಛಂದಸ್ಸಿಗೆ ಬೆಸುಗೆ ಮಾಡಿ ಮಂಡನೆ - ಹೀಗೆ ಗುರುತಿಸಬಹುದು.

**ವರ್ತಮಾನದಲ್ಲಿ ಕನಕ-ಕುಲ:**

ಪ್ರಸ್ತುತ ಕರ್ನಾಟಕದಲ್ಲಿ ಕನಕನಿಗೆ ಸಂಬಂಧಿಸಿ ನಡೆಯುತ್ತಿರುವುದು ನಿರ್ದಿಷ್ಟ ಜಾತಿಯ ಪ್ರತೀಕವಾಗಿ ಸ್ಥಿರೀಕರಿಸುವ ಪ್ರಕ್ರಿಯೆ (Iconization) ಎನ್ನಬಹುದು. ಕರ್ನಾಟಕದ ಒಂದು ನಿರ್ದಿಷ್ಟ-ದೊಡ್ಡ ಸಮುದಾಯ ಅಪ್ಪಿಕೊಳ್ಳುತ್ತಿದೆ. ಅಷ್ಟರಮಟ್ಟಿಗೆ, ಕನಕನನ್ನು ನಿರಾಕರಿಸಿದ ಸಮಾಜಕ್ಕೆ ಸಂದೇಶ ರವಾನಿಸುತ್ತಿದೆ. ಭಾರತದಂಥ ಜಾತಿನಿಷ್ಠ ವ್ಯವಸ್ಥೆಯಲ್ಲಿ ಒಂದು ಜನವರ್ಗವನ್ನು ಪ್ರಜಾಪ್ರಭುತ್ವ ನೆಲೆಯಲ್ಲಿ ಶಕ್ತಿಸಂಪನ್ನಗೊಳಿಸಲು ಈ ನಡೆ ರೂಪಕವಾಗಬಹುದು. ಆದರೆ, ಅದರ ಅಡ್ಡಪರಿಣಾಮಗಳ ಬಗ್ಗೆ ಕೂಡ ನಾವು ಎಚ್ಚರವಾಗಿರಬೇಕು. ಯಾವ ನೆಲೆಯಿಂದ ನೋಡಿದರೂ ಜಾತಿ ಗಾಯಗೊಳಿಸುವ ಸಾಧನವೇ ಸರಿ.

- ಆತ ಇಂಥದೇ ಕುಲಮೂಲದ ಅಹಂಭಾವದಿಂದ ಆತಂಕಿತನಾದವನು.
- ಆತಂಕಕ್ಕೀಡು ಮಾಡುವ ಪುರೋಹಿತಶಾಹಿಯನ್ನು ಪ್ರಶ್ನೆ ಮಾಡಿದವನು.
- ತಾನು ಅನಿವಾರ್ಯವಾಗಿ ಒಪ್ಪಿಕೊಂಡ 'ದ್ವೈತ' ತತ್ವದ ಜಾತೀಯ ಇಕ್ಕಟ್ಟನ್ನು ಮೀರಿ ಹೊರಟವನು.
- ಎಲ್ಲರೂ ಎಲ್ಲರನ್ನೂ ಸಹಜವಾಗಿ ಗೌರವಿಸುವ 'ಸಮಸಮಾಜ'ದ ಕನಸು ಕಂಡವನು.
- ಜೀವ-ದೇವರುಗಳ ನಡುವೆ ಮಧ್ಯವರ್ತಿಗಳ ಹಂಗಿನ ಅವಶ್ಯಕತೆಯನ್ನು ನಿರಾಕರಿಸಿದವನು.

ಇಂತಹ ಒಂದು ಚಿಂತನಶೀಲ ಪ್ರತಿಭೆಯನ್ನು ಒಂದು ನಿರ್ದಿಷ್ಟ ಜಾತಿಗೆ ಸೀಮಿತಗೊಳಿಸಿ, ವೈಭವೀಕರಿಸುವಾಗ ಎಚ್ಚರ ಇರಬೇಕು. ಪ್ರಜಾಪ್ರಭುತ್ವದಲ್ಲಿ ಒಂದು ದುರ್ಬಲ ವರ್ಗದವರಿಗೆ ಅಧಿಕಾರ ಶಕ್ತಿಯನ್ನು ಬಲಪಡಿಸುವ ಮಟ್ಟಿಗೆ ಸರಿ. ಆದರೆ ಅಲ್ಲಿಗೆ ಸೀಮಿತವಾಗಿ ನಿಲ್ಲಬಾರದು. ಕನಕ ಎಲ್ಲರಿಗೂ ಸಲ್ಲಬೇಕಾದ ರೂಪಕ. ಅದನ್ನು ನಾವೇ ಜಾತಿ ಸೀಮಿತತೆಯಿಂದ ಮಲಿನಗೊಳಿಸುತ್ತಿರುವೆವೋ? ವಿವೇಚಿಸಿ ಮುಂದಡಿ ಇಡಬೇಕು. ಬಸವಣ್ಣ , ಅಂಬೇಡ್ಕರ್, ಕನಕ ಯಾರದೇ ಒಬ್ಬರ-ಒಂದು ಜಾತಿಯ ಸ್ವತ್ತಾಗಬಾರದು.

ಹಾಗೆ ನೋಡಿದರೆ, ಕಳೆದ ಶತಮಾನದ ಎಪ್ಪತ್ತರ ದಶಕದ ದಲಿತ-ಬಂಡಾಯ ಯುಗದಲ್ಲಿ ಎಲ್ಲ ವರ್ಗದವರು ಅಪ್ಪಿಕೊಂಡ ಕಾರಣಕ್ಕಾಗಿ ಅಲ್ಲವೇ ಕನಕ 'ಮರುಜೀವ ತಳೆದದ್ದು'. ಸಮಸ್ತ ಹಿಂದುಳಿದ ವರ್ಗಗಳಿಗೆ ಅತ್ಯವಶ್ಯಕವಾಗಿರುವ ಸಾಂಸ್ಕೃತಿಕ ನಾಯಕತ್ವದಿಂದ ವಂಚಿಸುವುದು, ಯಾರು ಜಾತಿಕುಲ ನೀತಿ ಪ್ರತಿಪಾದಿಸುತ್ತಾ ಮೇಲುಕೀಳು ವಾದವನ್ನು ಉತ್ಪಾದಿಸುತ್ತಿದ್ದಾರೋ ಅವರಿಗೇ ಅನುಕೂಲ. ಯಾರನ್ನು ವಿರೋಧಿಸಿದನೋ ಅವರ ಒಡೆದು ಆಳುವ ನೀತಿಗೆ ಅವಕಾಶ ಮಾಡಿಕೊಟ್ಟಂತೆಯೇ ಸರಿ.

**ಫಲಿತಗಳು:**

ನಮ್ಮ ಹೆಮ್ಮೆಯ ಪರಂಪರೆಯಲ್ಲಿ, ಕನಕದಾಸನಂತಹ ಕವಿಯೊಬ್ಬನ ಮೂಲಕ ವರ್ತಮಾನದಲ್ಲಿ ನಾವು ಅತ್ಯಂತ ಜರೂರಾಗಿ ತಿಳಿದುಕೊಳ್ಳಬೇಕಾದ ಜನಬದುಕಿನ ನೆಲೆಗಳು ಯಾವುವು? ಎಂಬುದನ್ನು ಒಂದಿಷ್ಟು ಫಲಿತಗಳ ರೂಪದಲ್ಲಿ ಈ ಮುಂದಿನಂತೆ ಮಂಡಿಸಬಹುದು :

**1. ಸ್ಥಳೀಯತೆ - ಜಾಗತಿಕತೆ ಪ್ರತಿನಿಧಿತ್ವ :**

ಜಾಗತೀಕರಣದ ಅಬ್ಬರದಲ್ಲಿ ನಮ್ಮ ತನವನ್ನು ಉಳಿಸಿಕೊಳ್ಳುವುದು ಈ ಹೊತ್ತಿನ ಸವಾಲು. ಕನಕ ಅದಕ್ಕೆ ಒಂದು ಹಂತದಲ್ಲಿ ಉತ್ತರವಾಗಿ ಗೋಚರಿಸುತ್ತಾನೆ. ಚರಿತ್ರಕಾರರು ಆತನನ್ನು ವೈಷ್ಣವ ದಾಸಪಂಥದ ಅಚ್ಚಿಗೆ ಒಗ್ಗಿಸಲು ಎಷ್ಟೇ ಪ್ರಯತ್ನಿಸಿದರೂ ಅದು ಸಾಧಿತವಾಗಿಲ್ಲ. ಕಾರಣ ಆತ ಸ್ವಸಂಪೂರ್ಣವಾಗಿ ಭಾಗವತ ಪಂಥಕ್ಕೆ ದಾಸನಾಗಿಲ್ಲ. ಇತ್ತ ಸ್ಥಳೀಯ ಚಹರೆಗಳಿಂದ ಬಿಡಿಸಿಕೊಳ್ಳಲೂ ಸಾಧ್ಯವಾಗಿಲ್ಲ.

ಅವನ ಬಾಹ್ಯ ವೇಷ ಹಾಗೂ ತನ್ನ ಆಲೋಚನೆಯ ಅಭಿವ್ಯಕ್ತಿಗಾಗಿ ಬಳಸುವ ಭಾಷೆ - ಎರಡೂ ಈ ನೆಲದ ಬೆವರಿನ ಸಂಸ್ಕೃತಿಯನ್ನೇ ಪ್ರತಿಬಿಂಬಿಸುತ್ತದೆ. ಹೊರಗೆ ವಿಶ್ವಾತ್ಮೀಯ ವಿಚಾರ ಸಾರಿದ ಚಿಂತಕ ಹರಿದಾಸ; ಒಳಗೆ ಕಂಬಳಿ ಹೊದ್ದ ಕುರಿಯಯ್ಯ. ಆಧುನಿಕವಾದ Global ಚಿಂತನೆಯ ಜೊತೆಗೆ ಪ್ರಾಚೀನ ಪೂರ್ವಾಶ್ರಮದ Local ಬದುಕಿನ ಕ್ರಮ. ಇದರ ಬೆಸುಗೆಯೇ ವರ್ತಮಾನಕ್ಕೆ ತುರ್ತಾಗಿ ಬೇಕಾಗಿರುವ ಮಾದರಿ. ತಾನು ಹುಟ್ಟಿದ ಕುರುಬಕುಲ ಮತ್ತು ಮುಟ್ಟಿದ ಭಾಗವತ ನೆಲೆ. ಇವೆರಡರ ನಡುವೆ ಆತ ಅಡಗಿಸಿ ತೋರುತ್ತಿರುವ ಸತ್ಯದ ದಾರಿಯನ್ನು ಅರಿತು ಸಾಗಬೇಕಿದೆ.

**2. ಜೀವ - ದೇವರುಗಳ ನಡುವಣ ರಾಯಭಾರಿ**

ಕನಕದಾಸ ಜೀವ ಹಾಗೂ ದೇವರುಗಳ ನಡುವಣ ಸಂಬಂಧ ಬೆಸೆಯುವ ರಾಯಭಾರಿ. ಒಂದೆಡೆ, "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ" ಎಂದು ಜೀವಗಳ ಪರವಾಗಿ ಬೇಡುತ್ತಾನೆ. ಅದೇ ಹೊತ್ತಿನಲ್ಲಿ "ತಲ್ಲಣಿಸದಿರು ತಾಳುಮನವೆ, ಎಲ್ಲರನು ಸಲಹುವನು" ಎಂದು ಕಾಯುವವನ ಜೊತೆ ನಿಂತು ಅಭಯ ನೀಡುತ್ತಾನೆ. ನಮಗೀಗ ಬೇಕಿರುವುದು ಕೂಡ ಇಂತಹ ಜೀವ ಹಾಗೂ ದೇವರುಗಳ ನಡುವಣ ರಾಯಭಾರಿಗಳೇ ಹೊರತು ಮಧ್ಯವರ್ತಿಗಳಾಗಿ ನಿಂತು ಆತಂಕ ಹುಟ್ಟಿಸುವ ಪೂಜಾರಿಗಳಲ್ಲ.

ಅಷ್ಟು ಮಾತ್ರವಲ್ಲ. ಕನಕನು ನಿವೇದಿಸುತ್ತಿರುವ ಅಧ್ಯಾತ್ಮ ಇಂದಿನ ಮತಮೂಲ ಧಾರ್ಮಿಕತೆಯಲ್ಲ. ಆ ಚೌಕಟ್ಟನ್ನು ಮೀರಿ ಆಲೋಚನೆಗೆ ಹಚ್ಚುವಂಥದ್ದು. ಎಲ್ಲರನ್ನು ಒಳಗೊಳ್ಳುವಂಥದ್ದು. ಧರ್ಮ ಎನ್ನುವುದೇ ಖಾಸಗಿಯಾಗಿ ಹಂಚಿಕೊಳ್ಳಬೇಕಾದ ಗುಪ್ತನಿಧಿ. ದೈವಾರಾಧನೆ ಅವರವರ ಇಷ್ಟದ್ದು; ತಮತಮಗೆ ಹೇಗೆ ಬೇಕೋ ಹಾಗೇ ಮಾಡಿಕೊಳ್ಳುವಂಥದ್ದು. ದೇವರು ದೀನ-ದುರ್ಬಲರ ನಂಟನೂ, ಬ್ರಹ್ಮಾಂಡ ಕೋಟಿಯನ್ನು ಒಂದೇ ತಾಯಿ ಪ್ರೀತಿಯಲ್ಲಿ ಸಲಹುವವನೂ ಆಗಿರಬೇಕೆಂಬುದು ಕನಕನ ಷರತ್ತು. ಇಲ್ಲದಿರೆ ಭಕ್ತಿವಿರುದ್ಧ ಆಗುತ್ತದೆ[3] ಎಂಬುದು ಆತನ ನೇರ ದಿಟ್ಟ ನುಡಿ.

**3. ಅಸಹಿಷ್ಣುತೆಯೇ ಧರ್ಮವಲ್ಲ**

ಹೇಳಿದಂತೆ ಕೇಳಿಕೊಂಡು ಬಿದ್ದಿರುವುದು ಧರ್ಮ; ದ್ವೇಷಮಾತ್ರವೇ ದೇಶಪ್ರೇಮ – ಅನ್ನುವ ದುರ್ಭಿಕ್ಷ ಕಾಲದ ಮೂಕಸಾಕ್ಷಿಗಳು ನಾವು. ಈ ಸ್ಥಿತಿ ಇಂದು-ನಿನ್ನೆಯದಲ್ಲ. ಕನ್ನಡ ಪರಂಪರೆಯಲ್ಲಿ ಇದಕ್ಕೆ ಉದ್ದದ ಚರಿತ್ರೆ ಇದೆ. ಅಂಥ ನೋವಿನ ಚರಿತ್ರೆಯಲ್ಲಿ ನಮ್ಮನ್ನು ಎದುರುಗೊಳ್ಳುವ ಕನಕ ಅಸಹನೆಯ ನೇರಾತಿನೇರ ಬಲಿಪಶು.

ಆದರೆ ನೋವುಂಡ ಕಾರಣಕ್ಕೆ ನೋವುಣಿಸಿದವರನ್ನು ಗಾಯಗೊಳಿಸುವ ಗುಣ ಅವನದಲ್ಲ. ಎಲ್ಲವನ್ನೂ ತಾಳ್ಮೆಯಿಂದ ಸಹಿಸುವ, ಸಹನೆಯ ಮೂಲಕವೇ ಸಮುದಾಯದೊಳಗೆ ಚಿಂತನೆ ಬೆಳೆಸುವ, ಭಾಷೆಯನ್ನು ಬೆಂಕಿಯಾಗಿಸದೆ ಬೆಳಕಾಗಿ ಬಳಸುವ ಮುತ್ಸದ್ಧಿತನ ತೋರುತ್ತಾನೆ. ಸಹನೆಯನ್ನೇ ಧರ್ಮವಾಗಿಸುವ ಇಂಥ ಸಂತತನ ಇಂದಿನ ಅತ್ಯಮೂಲ್ಯ ಅವಶ್ಯಕತೆ ಆಗಬೇಕಿದೆ.

**4. ಸಂಪತ್ತಿನ ಅನೈತಿಕ ವೈಭವೀಕರಣ**

ಜೀವಮುಕ್ತಿಯ ಅಪೇಕ್ಷೆ ಲೌಕಿಕದ ಮೂಲಕವೇ ಆಗಬೇಕೆಂಬ ತತ್ವವನ್ನು ಪ್ರತಿಪಾದಿಸಿದವರಲ್ಲಿ ಕನಕನೂ ಒಬ್ಬ. ಆದರೆ ಲೌಕಿಕತೆಯ ಆಕಾಂಕ್ಷೆಗಳನ್ನು ಮಿತಿಮೀರದಂತೆ ಬಳಸುವ ಮತಿಯೇ ಇಲ್ಲದೇ ಹೋದರೆ? ಇಂಥದೇ ಸಂದರ್ಭದಲ್ಲಿ ಜಗದ ಜಂಜಾಟಗಳನ್ನು ನೋಡಿ, "ಎಲ್ಲಾರೂ ಮಾಡುವುದು ಹೊಟ್ಟೆಗಾಗಿ-ಗೇಣುಬಟ್ಟೆಗಾಗಿ" ಎಂದು ಗಹನ ಸತ್ಯವನ್ನು ಸರಳವಾಗಿ ಸಾರಿದ. ಹೇಳಿ ಸುಮ್ಮನಾಗದೆ ತಾನೇ ಬದುಕಿ ತೋರಿದ.

ಆದರೆ ಸಿರಿಗರ ಬಡಿದಂತೆ ಒಡೆದು ಕಾಣುವ ಇಂದಿನ ಸಂಪತ್ತಿನ ವೈಭವೀಕರಣ ಅನೈತಿಕವಾದುದು. ಬಡವ-ಬಲ್ಲಿದರ ನಡುವಣ ಅಂತರವಂತೂ ಅಸಮಾನ ಪ್ರಪಂಚವನ್ನೇ ನಿರ್ಮಿಸುತ್ತಿದೆ. ಇದರ ನಾಗಾಲೋಟ ಮಿತಿಮೀರಿ ಸಾಗಿದೆ. ಈ ಪರಿಯ ಕರಣ ಗಣಗಳ ರಿಂಗಣವನ್ನು ತಡೆಯಲು ಕನಕ ನಿಮಿತ್ತನಾಗಬಲ್ಲನು. ಕತ್ತಿ ಹಿಡಿದ ಕೈಯಲಿ ತಂಬೂರಿ; ಗುರಾಣಿ ಹಿಡಿದ ಕೈಯಲ್ಲಿ ಬೋನಾಸಿ. ಯುದ್ಧದಾಹಿ ಪ್ರಭುತ್ವವನ್ನು, ಸಂಪತ್ತು-ಕೋಶ-ಅಧಿಕಾರಗಳ ಅರಮನೆಯನ್ನು ತೊರೆಯದೆ ಇದ್ದಿದ್ದರೆ ಕನಕ ಈ ತನಕ ಉಳಿಯುತ್ತಿದ್ದನೆ?

**5. ಸಮನ್ವಯ ಜೀವನಮೀಮಾಂಸೆ**

ಭಾರತದ ಚರಿತ್ರೆಯಲ್ಲಿ ಕಳೆದೆರಡು ಶತಮಾನಗಳಿಂದ ಸಮನ್ವಯಕ್ಕಾಗಿ ನಡೆದ ತ್ಯಾಗದ ಹೋರಾಟ ದೊಡ್ಡದು. ಆದರೆ ಈಗೀಗ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಎಲ್ಲಿ ನೋಡಿದರಲ್ಲಿ ಈಗ ವಿಚ್ಛಿದ್ರಕಾರಕ ಶಕ್ತಿಗಳೇ ವಿಜೃಂಭಿಸುತ್ತಿರುವಂತೆ ಕಾಣುತ್ತಿದೆ. ಸಂಘಜೀವಿ ಆಗಬೇಕಿದ್ದ ಮನುಷ್ಯರು ದ್ವೀಪಗಳನ್ನು ನಿರ್ಮಿಸಿಕೊಂಡು ಕುಬ್ಜರಾಗುತ್ತಿದ್ದಾರೆ. ಇಂತಹ ವಿಘ್ನಸಂತೋಷಿಗಳ ವಿಪರೀತದ ಕಾಲಕ್ಕೆ ಸಾಮರಸ್ಯವು ಅತ್ಯವಶ್ಯವಾದ ಜೀವನಮೀಮಾಂಸೆ ಆಗಬೇಕಿದೆ.

ಇದಕ್ಕೆ ಕನಕಕಾವ್ಯದಲ್ಲಿ ಧಂಡಿಯಾಗಿ ನಿದರ್ಶನಗಳಿವೆ. ಸಂವಾದ-ವಾದ-

ವಾಗ್ವಾದವನ್ನು ದಾಟಿ ದೇಗುಲ ನಾಶದವರೆಗೆ ಹೋಗಿದ್ದ ಶೈವ-ವೈಷ್ಣವರ ಕಲಹವನ್ನು ಉಪಶಮನ ಮಾಡುವ ಕಾಳಜಿಯಲ್ಲಿ ಬರೆದ ಕೃತಿ 'ಮೋಹನ ತರಂಗಿಣಿ'. ಹರಿಹರ ಸಾಮರಸ್ಯದ ಉದ್ದೇಶದಿಂದ ಅದು ಹೊರಡುತ್ತದೆ. ಅದರಲ್ಲಿ ಸಂಭವನೀಯ ಸಾವನ್ನು ತಡೆಯುವ, ಅಲ್ಪಸಂಖ್ಯಾತರ ಹಕ್ಕನ್ನು ಕಾಪಾಡುವ, ಬಹುಸಂಖ್ಯಾತರ ಹೊಣೆಯನ್ನು ಎಚ್ಚರಿಸುವ ಸಾಕ್ಷಿಪದ್ಯಗಳಿವೆ. ಏನೇ ಬಂದರೂ ಸಮನ್ವಯದ ಸಹಬಾಳುವೆಗೆ ಕುಂದು ತರದಂತೆ ಮುನ್ನಡೆಯಬೇಕೆಂದು ಸಾರಿದ ಕಾವ್ಯಸಂದೇಶಕ್ಕೆ ನಾವು ಕಣ್ತೆರೆಯಬೇಕಲ್ಲವೆ?

### 6. ಆಹಾರದ ವಿಭಜನೆ

ಮನೆಯೂಟವನ್ನು ಬೀದಿಯಲ್ಲಿ ತೆಗೆದು ಪರೀಕ್ಷಿಸುವ ಪರಿಪಾಠ ಹೊಸಕಾಲದ ಬೆಳಸು. ತಿನ್ನುವ ಅನ್ನಕ್ಕೆ ಬಣ್ಣಹಚ್ಚಿ, ಮನುಷ್ಯಕುಲವನ್ನು ಸಾತ್ವಿಕ-ತಾಮಸ ಎಂಬಂತೆ ವಿಭಜಿಸುತ್ತಿರುವುದು ಹೃದಯವಿದ್ರಾವಕ. ರಾಗಿ ಹೆಚ್ಚೋ ಬತ್ತ ಹೆಚ್ಚೋ ಅನ್ನುತ್ತಾ ಚರ್ಚೆ ಬೆಳೆಸುವ 'ರಾಮಧಾನ್ಯ ಚರಿತ್ರೆ'[4] ಈ ಪ್ರಶ್ನೆಯನ್ನು ತಾರ್ಕಿಕವಾಗಿ ಎದುರಾಗುತ್ತದೆ. ನಮ್ಮ ಸಾಮಾನ್ಯ ಜನರ ಜೀವನಾಧಾರವಾದ 'ರಾಗಿ'ಯನ್ನು ಇಲ್ಲಿ ಒಂದು ವಿಶಿಷ್ಟ ಸಾಮಾಜಿಕ ಉದ್ದೇಶಕ್ಕೆ ಬಳಸಿರುವ ರೀತಿ ಅಪೂರ್ವವಾಗಿದೆ.

ದುಡಿಯುವ ವರ್ಗ ತಿನ್ನುವ ಆಹಾರವನ್ನು ಹೀನೈಸುವ ಹಿತಾಸಕ್ತಿಗೆ ಕನಕ ಇಲ್ಲಿ ನಿಸರ್ಗವಿವೇಕವನ್ನೇ ಮುಂದಿಟ್ಟು ಉತ್ತರಿಸುತ್ತಾನೆ. ದಿನಬಳಕೆ ವಸ್ತುಗಳ ಗುಣದೋಷ ವಿವೇಚನೆ ಮಾಡುತ್ತಲೇ ತಾವು ಹುಟ್ಟಿಬಂದ ತಳಸಮುದಾಯಕ್ಕೆ ಆತ್ಮಗೌರವವನ್ನೂ, ಆತ್ಮವಿಶ್ವಾಸವನ್ನೂ ಉದ್ದೀಪಿಸುತ್ತಾನೆ. ಸಮುದಾಯ ನಾಯಕರಾದವರು ತೋರಬೇಕಾದ ನಿಜವಾದ ಕಾಳಜಿ; ವಹಿಸಬೇಕಾದ ಪಾತ್ರ ಈ ಬಗೆಯದು.

### 7. ಕುಟುಂಬ ಸಂಬಂಧಗಳ ಬೆಸೆವ ಮೌಲ್ಯ

ನಮ್ಮ ಸಮಾಜ ಕುಟುಂಬದ ನೆಲೆಗಟ್ಟಿನ ಮೇಲೆ ಕಟ್ಟಿದಂಥದು. ಅದೊಂದು ಜೀವನಮೌಲ್ಯವಾಗಿ ದಾಂಪತ್ಯ ಸಂಬಂಧವನ್ನು ಕಾಲದಿಂದಲೂ ಗಟ್ಟಿಮಾಡುತ್ತಾ ಬಂದಿದೆ. ದಾಂಪತ್ಯ ಹಸನಾಗಿದ್ದರೆ ಸ್ವಸ್ಥ ಕುಟುಂಬ; ಕುಟುಂಬ ಹಸನಾಗಿದ್ದರೆ ಸ್ವಸ್ಥ ಸಮಾಜ. ಆದರೆ ಇಂದು ಜಾಗತಿಕ ವಲಯಗಳಿಂದ ತೂರಿಬರುತ್ತಿರುವ ಅತ್ಯಾಧುನಿಕತೆಯ ಆಕರ್ಷಣೆ ನಮ್ಮ ಕುಟುಂಬ ಸಂಬಂಧಗಳನ್ನು ಕೆಡಿಸುತ್ತಿದೆ. ಸ್ವಾತಂತ್ರ್ಯದ ಎಲ್ಲೆ ಮೀರಿದ ಸ್ವಚ್ಛಂದತೆ ಸುತ್ತಮುತ್ತ ರೋಗಗಳನ್ನು ಹಬ್ಬಿಸುತ್ತಿದೆ.

ಕನಕನ 'ನಳಚರಿತ್ರೆ' ದಾಂಪತ್ಯ ಸಂಬಂಧದ ಎಳೆಗಳನ್ನು ಹೊಸೆವ ಕಾವ್ಯ. ನಿಸ್ವಾರ್ಥಮೂಲವಾದ ಪ್ರೇಮ, ಪರಿಶುದ್ಧ ಅಂತಃಕರಣ-ಲೋಕದ ಎಂಥದೇ ದುಷ್ಟಶಕ್ತಿಗಳನ್ನು ಗೆಲ್ಲಬಲ್ಲುದು. ಇಂದಿಗೆ ಸಾಂಪ್ರದಾಯಿಕ ಎನಿಸುವ ಕುಟುಂಬ ರಕ್ಷಣೆಯಲ್ಲಿ ಹೆಣ್ಣಿನ ತ್ಯಾಗ ಎಂಥದು, ಅದಕ್ಕೆ ಪುರುಷಲೋಕ ಕೊಡಬೇಕಾದ ಗೌರವ ಯಾವ ಬಗೆಯದು ಎಂಬುದನ್ನು ಅದ್ಭುತ ಕಥೆಯಾಗಿಸಿ ಹೇಳುತ್ತದೆ.

### 8. ಎಲ್ಲರೂ ಮುಖ್ಯರು ಎಂಬ ಸರ್ವೋದಯ ತತ್ವ

ಪ್ರಸ್ತುತದಲ್ಲಿ ಚಿಗುರೊಡೆಯುತ್ತಿರುವ ಚಿಂತನೆಯೊಂದು ಹೀಗಿದೆ. ವರ್ಣಾಶ್ರಮದ ಮೂಲಕ ಕಡೆಗಣನೆಗೆ ಒಳಗಾದ ಸಮುದಾಯಗಳು ಪ್ರಭುತ್ವವಾಗಿ ಅಸ್ತಿತ್ವಕ್ಕೆ ಬರಬೇಕು. ಆರಾಮ ಜೀವನ ನಡೆಸಿದ ಸಮುದಾಯಗಳು ತಮ್ಮ ಹಾಗೆ ಗುಲಾಮಗಿರಿಗೆ ಸಲ್ಲಬೇಕು, ಅಥವಾ ಇಲ್ಲವಾಗಬೇಕು. ಸಾಮಾಜಿಕ ಏಣಿಶ್ರೇಣಿ ಪಲ್ಲಟಗೊಂಡು ತಿರುವು ಮುರುವು ಆಗಬೇಕು.

ಆದರೆ ಕನಕನದ್ದು ಸಮಾನಾಂತರ ನೆಲೆಯ ಚಿಂತನೆ. 'ನಿಮ್ಮ ಕುಲದ ನೆಲೆಯ ಬಲ್ಲಿರಾ?' ಎಂದು ಪ್ರಶ್ನೆ ಮಾಡುತ್ತಾನೆ. ಅವನಿಗೆ ಈ ನೆಲ ಗಾಯಗೊಳಿಸುವವರು ಗಾಯಗೊಂಡವರು ಇಬ್ಬರಿಗೂ ಸೇರಿದ್ದು ಎಂಬುದರ ಅರಿವಿದೆ. ಹಾಗಾಗಿ ಕಹಿಯಾಡುವುದಿಲ್ಲ. ತಿಳಿವಿನ ಪಾಠ ಹೇಳುತ್ತಾನೆ. "ಧರೆಯೊಳಗೆ ರಾಗಿ-ಬತ್ತ ಇಬ್ಬರೂ ಅತಿಹಿತದಲಿ ನೀವಿಹುದು"[5] ಎನ್ನುತ್ತದೆ ಕಾವ್ಯನ್ಯಾಯ. ಅವನ ಹಾಗೆ ಎಲ್ಲ ದೊಡ್ಡವರು ಸಾರಿದ "ಇಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ. ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ" ಎಂಬ ಸರ್ವೋದಯ ತತ್ವ ಜೀವನಪಾಠ ಆಗಬಲ್ಲುದೆ?

**ಉಪಸಂಹಾರ:**

ಹೀಗೆ, ಸಂಘರ್ಷಮಯ ಬದುಕನ್ನು ಬದುಕಿ ಸಮನ್ವಯದ ಸಂದೇಶ ಸಾರಿದ ಮಹಾನುಭಾವ ಕನಕದಾಸ. ಅವನ ನೆನಪು ಈ ಕೆಲವಾದರೂ ಪ್ರಶ್ನೆಗಳನ್ನು ಹುಟ್ಟಿಸದಿದ್ದರೆ? ನಮ್ಮನ್ನು ಸೂಕ್ಷ್ಮಗೊಳಿಸದಿದ್ದರೆ? ಈ ಬಗೆಯ ಜನ್ಮಜಯಂತಿಗಳಾಗಲಿ ನಿರರ್ಥಕ.

ಒಟ್ಟಿನಲ್ಲಿ, 'ಆತ್ಮ ಯಾವ ಕುಲ - ಜೀವ ಯಾವ ಕುಲ' ಎಂದವನನ್ನು ಈಗ ಒಂದು ಜಾತಿಗೆ ಸೇರಿಸಿ ಕಟ್ಟಿ ಹಾಕಲಾಗಿದೆ. ಇದನ್ನು ಪ್ರಜಾಸರ್ಕಾರಗಳೇ ಮುಂದೆ ನಿಂತು ಮಾಡುತ್ತಿರುವುದಂತೂ ಚಿಂತಾಜನಕ. ಸಮಸ್ತರಿಗೆ ಸಲ್ಲಬೇಕಾದ ಪ್ರತಿಭೆಗಳಿಗೆ ಲೇಬಲ್ ಅಂಟಿಸುವುದು ನಮ್ಮ ಸಂಸ್ಕೃತಿಯ ಅಂಗವೈಕಲ್ಯಕ್ಕೆ ಕನ್ನಡಿ ಹಿಡಿದಂತೆ. ಜಾತಿಮೂಲ ಗುರುತಿಸಿ ಪ್ರತ್ಯೇಕಿಸುವುದು ವಿಚಾರಜೀವಿಗೆ ಎಸಗುವ ಅಪಚಾರ. ಯಾವುದನ್ನು ವಿರೋಧಿಸಿದನೋ ಅದನ್ನೇ ಗದ್ದಿಗೆ ಮಾಡಿ ಕೂರಿಸಿದಂತೆ. ನಾವು ವಿಶ್ವಮಾನವರ ಎತ್ತರಕ್ಕೆ ಏರಲಾಗದೆ ಇದ್ದರೆ ಕೈಸೋತವರಂತೆ ಸುಮ್ಮನಿರೋಣ. ನಮ್ಮ ಕೇರಿಗೆ ಅವರನ್ನು ತಂದು ಸೀಮಿತಗೊಳಿಸುವುದು ಬೇಡ.

## ಕೊನೆ ಟಿಪ್ಪಣಿಗಳು:

1. ಸುಧಾಕರ (ಸಂ). (1999). ಕನಕ ಸಾಹಿತ್ಯ ದರ್ಶನ ಸಂಪುಟ - 4. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ಪು.ಸಂ. 661
2. ಶಿವರಾಮ ಶೆಟ್ಟಿ ಬಿ. (ಸಂ). (212). ಕನಕ ಚಿಂತನ. ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ. ಮಂಗಳೂರು. ಪು.ಸಂ. 179
3. ರಂಗನಾಥ ಶರ್ಮ ಎಸ್. (ಸಂ). (2000). ಹರಿಭಕ್ತಿಸಾರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು. ಪು.ಸಂ. 661
4. ಜವರೇಗೌಡ ದೇ. (2002). ಕನಕ ದರ್ಶನ. ತನುಮನ ಪ್ರಕಾಶನ. ಮೈಸೂರು. ಪು.ಸಂ. 128
5. ಜವರೇಗೌಡ ದೇ. (ಸಂ). (1999). ರಾಮಧಾನ್ಯ ಚರಿತ್ರೆ. ಡಿ.ವಿ.ಕೆ. ಮೂರ್ತಿ ಪ್ರಕಾಶನ. ಮೈಸೂರು. ಪು.ಸಂ. 112

## ಪರಾಮರ್ಶನ ಗ್ರಂಥಗಳು:

1. ಜವರೇಗೌಡ ದೇ. (ಪ್ರ.ಸಂ). (1999). ಕನಕ ದರ್ಶನ ಸಂಪುಟಗಳು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು
2. ತಾರಾನಾಥ ಎನ್. ಎಸ್. (ಸಂ). (2001). ಶತಮಾನದ ಸಂಶೋಧನೆ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
3. ಶಿವರುದ್ರಪ್ಪ ಜಿ. ಎಸ್. (ಸಂ). (1989). ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು.
4. ನಾಗರಾಜ ಕಿ. ರಂ. (2013). ಕಾಲಜ್ಞಾನಿ ಕನಕ. ಅಭಿನವ ಪ್ರಕಾಶನ. ಬೆಂಗಳೂರು.
5. ಚಿಕ್ಕಮಗಳೂರು ಗಣೇಶ. (2021). ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.